ದೊಡ್ಡ ವ್ಯಕ್ತಿಯಾಗಿದ್ದರೂ, ಹೆಂಡತಿಯನ್ನು ಬಹಳ ಸುಖವಾಗಿ ನೋಡಿಕೊಳ್ಳುವೆನೆಂಬ ಭಾವನೆಯಿರುವ ವ್ಯಕ್ತಿಯಾಗಿದ್ದರೂ ಸಹ, ಹೆಣ್ಣಿನ ಅಂತಃಸತ್ವವನ್ನು ಅರಿಯಲು ಸಾಧ್ಯವಿಲ್ಲವೆಂಬ ತಿಳಿವನ್ನು ಅವರು ಹೊಂದಿದ್ದರು.

◆ **ಸಾಂಗತ್ಯವು ಪರಸ್ಪರರನ್ನು ವಿಕಾಸಗೊಳಿಸದೇ ಬಂಧನವಾದಾಗ, ಬಿಡುಗಡೆಯ ದಾರಿಗಳಿಗಾಗಿ ಒಳಮನಸ್ಸು ಹುಡುಕಾಡುತ್ತದೆ. ಅಂಥ ಹುಡುಕಾಟದ ಸೂಕ್ಷ್ಮ ಎಳೆಗಳು ನಿಮ್ಮ ಕಥೆಗಳಲ್ಲಿವೆ. 'ಅವಳ ಸ್ವಾತಂತ್ರ್ಯ', 'ಬಿಡುಗಡೆ', 'ಮರೀಚಿಕೆ'ಯಂಥ ಕಥೆಗಳು ಇದನ್ನು ಸೂಕ್ಷ್ಮವಾಗಿ ಕಾಣಿಸುತ್ತವೆ. 'ಮರೀಚಿಕೆ' ಕಥೆಯ ನಾಯಕಿ, ಮನೆಯಿಂದ ಸ್ವತಂತ್ರವಾಗಿ ಆಚೆ ಬಂದರೂ ತಾನು ಹಾಲಿನ ಭಾಂಡಿಗೆ ಮುಚ್ಚಳ ಹಾಕಿಲ್ಲವೇನೋ ಎಂಬ ಅನುಮಾನ ಕಾಡುತ್ತಾ ಅವಳು ಮಾನಸಿಕವಾಗಿ ಗೃಹಬಂಧಿಯೇ ಆಗಿರುತ್ತಾಳೆ. 'ಹಾಲಿನ ಭಾಂಡಿ' ಅವಳ ಅಸ್ತಿತ್ವದ ಹೊಯ್ದಾಟಕ್ಕೆ ಅದ್ಭುತ ರೂಪಕವಾಗಿ ಕಂಡಿತ್ತು.**

ಯುನಿವರ್ಸಲ್ ವಿಷಯವಿದು. ಇದಕ್ಕೆ ಒಂದು ಕಾಲದ ಮಿತಿಯಿಲ್ಲ. 'ಬಿಡುಗಡೆ', 'ಮರೀಚಿಕೆ' ಕಥೆಗಳಲ್ಲಿ ಹೆಣ್ಣಿನ ಬಿಡುಗಡೆ ಸಂಪೂರ್ಣ ಸಾಧ್ಯವಿಲ್ಲದೆ ತೊಳಲುವ ಚಿತ್ರವಿದ್ದು, ಇಂದಿಗೂ ಅದೇ ಸ್ಥಿತಿ ಮುಂದುವರಿದಿರುವುದನ್ನು ಕಾಣಬಹುದು. ಕಾಲದ ಜೊತೆ ವಿಕಾಸವಾಗದ ಸಮಾಜದ ಮನಃಸ್ಥಿತಿಯನ್ನು ನೆನದರೆ ದಿಗಿಲಾಗುತ್ತದೆ. ಹೆಣ್ಣಿನ ಜಗತ್ತು ಕೇವಲ ಸಮಾನತೆಯ ಶೋಧನೆ ಅಲ್ಲ. ಅದೊಂದು ಮುಕ್ತಿಯ ಮೂಲಭೂತ ಶೋಧ.

◆ **ರಾಜಲಕ್ಷ್ಮಿ ಎನ್. ರಾವ್ ನಿಮ್ಮ ಸಮಕಾಲೀನ ಬರಹಗಾರ್ತಿಯಾಗಿದ್ದವರು. ಅವರಲ್ಲಿ ಈ ಮುಕ್ತಿಯ ಶೋಧವು ಆಧ್ಯಾತ್ಮಿಕ ಜಿಜ್ಞಾಸೆ ಕಡೆಗೆ ಕೊಂಡೊಯ್ದಿತು. ಈ ಮುಕ್ತಿಯ ಆಧ್ಯಾತ್ಮಿಕ ಸ್ವರೂಪದ ಬಗೆಗೆ ನಿಮಗೇನನಿಸುತ್ತದೆ?**

ಅದೊಂದು ದೊಡ್ಡ ಬಿಡುಗಡೆ. ಅದು ಭೌತಿಕ ಜಗತ್ತಿನಿಂದ ಮುಕ್ತಿಯೂ ಹೌದು. ಶೋಷಣೆ, ಅನ್ಯಾಯ, ರಾಜಕೀಯಗಳಿಂದ ದೂರವುಳಿದರು ರಾಜಲಕ್ಷ್ಮಿ. ನವ್ಯದ ಸಂದರ್ಭದಲ್ಲಿ ವಿಮರ್ಶಕರು ಹೆಚ್ಚಾಗಿ ಹೆಸರಿಸುತ್ತಿದ್ದುದು ರಾಜಲಕ್ಷ್ಮಿ ಹಾಗೂ ನನ್ನನ್ನು ಮಾತ್ರ. ಅವರು ಯಾಕೆ ಸಡನ್‌ಆಗಿ ಎಲ್ಲದರಿಂದ ದೂರವಾದರೋ ಅಂತ ನಾನು ಬಹಳ ಸಲ ಚಿಂತಿಸಿದ್ದಿದೆ. ಆದರೆ ಅಧ್ಯಾತ್ಮದ ಸೆಳೆತದ ಬಗ್ಗೆ ನಾನು ಏನೂ ಹೇಳಲಾರೆ.

◆ **ಭಿನ್ನ ಹಿನ್ನೆಲೆಗಳಿಂದ ಬಂದ ಅನೇಕ ಬರಹಗಾರ್ತಿಯರು 'ಲಂಕೇಶ್ ಪತ್ರಿಕೆ'ಯ ಮೂಲಕ ಬೆಳಕಿಗೆ ಬಂದರು. ನೀವು ಆ ಪ್ರಭಾವಳಿಯಿಂದ ಹೇಗೆ ತಪ್ಪಿಸಿಕೊಂಡಿರಿ?**

ಪ್ರಭಾವಳಿಯಿಂದ ತಪ್ಪಿಸಿಕೊಳ್ಳುವ ಪ್ರಶ್ನೆಯಿಲ್ಲ. ಲಂಕೇಶ್ ವೈಯಕ್ತಿಕವಾಗಿ ಬಹಳ ಒಳ್ಳೆಯ ಸ್ನೇಹಿತರಾಗಿದ್ದರು. ಲಂಕೇಶ್ ಪತ್ರಿಕೆಗೆ ಬರೆಯುವಂತೆ ಬಹಳ ಕೇಳುತ್ತಿದ್ದರು. ಯಾವುದೋ ಒಂದು ದುರ್ಬಲ ಪಾಯಿಂಟ್‌ನಲ್ಲಿ ಕೌಟುಂಬಿಕ ಕಾರಣಗಳಿಗಾಗಿ ನಾನು ಲಂಕೇಶ್ ಪತ್ರಿಕೆಗೆ ಬರೆಯಲೇ ಇಲ್ಲ. ಅವರ ಪತ್ರಗಳನ್ನೂ ನನಗೆ ಕಾಯ್ದಿರಿಸಿ ಕೊಳ್ಳಲು ಸಾಧ್ಯವಾಗಲಿಲ್ಲ. ಅವರು ವಾರಕ್ಕೆ ಮೂರು ನಾಲ್ಕು ಪತ್ರಗಳನ್ನು ಬರೆಯುತ್ತಿದ್ದರು. ಅವುಗಳಲ್ಲಿ ಸಮಕಾಲೀನ ವಿದ್ಯಮಾನಗಳ ದೀರ್ಘ ಚರ್ಚೆಯಿರುತ್ತಿತ್ತು. ಮೊಬೈಲ್‌ಗಳಂಥ ಸಂಪರ್ಕ ಸಾಧನಗಳಿಲ್ಲದಿದ್ದ ಆ ಕಾಲದಲ್ಲಿ ಪತ್ರಗಳೇ ಏಕೈಕ ಸಂಪರ್ಕ ಮಾಧ್ಯಮವಾಗಿದ್ದವು. ಅವುಗಳನ್ನು ನಾನು ಕಾಯ್ದಿರಿಸಿದ್ದರೆ, ಬಹುಶಃ ಅವು ಪ್ರತ್ಯೇಕ ಸಾಹಿತ್ಯ ಚರಿತ್ರೆಯೇ ಆಗಿರುತ್ತಿದ್ದವು. ಮತ್ತದೇ ಕೌಟುಂಬಿಕ ಕಾರಣಗಳಿಗಾಗಿ ನಾನದನ್ನು ಕಾಪಿಡಲಾಗಲಿಲ್ಲ. ನಾನೇಕೆ ಆಗ ಅಷ್ಟು ಸಬ್‌ಮಿಸಿವ್ ಆಗಿದ್ದೆ ಎಂದು ಈಗ ಕಸಿವಿಸಿಯಾಗುತ್ತದೆ.

◆ **ನೀವೇಕೆ ಆತ್ಮಕಥನವನ್ನು ಬರೆದಿಲ್ಲ? ಬರೆಯುವುದು ಮತ್ತು ಬದುಕುವುದರ ನಡುವಿನ ಬಿಕ್ಕಟ್ಟುಗಳನ್ನು ಶೋಧಿಸಿಕೊಳ್ಳಲು**

